ಸರ್ಕಾರದಲ್ಲಿ ಸ್ವೀಕೃತವಾಗಿದೆ. ಆದರೆ ಸರ್ಕಾರ ಇದನ್ನು ಸಕಾರಾತ್ಮಕವಾಗಿ ಪರಿಗಣಿಸಿರುವುದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಸ್ವಲ್ಪ ಇಚ್ಚಾಶಕ್ತಿಯನ್ನು ತೋರಿಸಿ, ಹೈಕೋರ್ಟ್ ಸೂಚನೆ ಪ್ರಕಾರ ಆಂಧ್ರ ಪ್ರದೇಶದಲ್ಲಿ ಯಾವ ರೀತಿ ಆರು ತಿಂಗಳು ತರಬೇತಿಯನ್ನು ಕೊಟ್ಟು ಅವರಿಗೆ ಅವಕಾಶ ಕೊಟ್ಟಿದ್ದಾರೋ ಅದೇ ರೀತಿ ಕರ್ನಾಟಕದಲ್ಲೂ ಕೂಡ ಸಾವಿರಾರು ಬಡ ಕುಟುಂಬಗಳ ರಕ್ಷಣೆ ಮಾಡತಕ್ಕಂತಹ ಅವಕಾಶವನ್ನು ಗ್ರಾಮಾಂತರ ಭಾಗದಲ್ಲಿರುವ ಇಂಥ ನಾಟಿ ವೈದ್ಯರಿಗೆ ಮಾನ್ಯ ಮಂತ್ರಿಗಳು ಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ. ಅದಕ್ಕೆ ಉತ್ತರವನ್ನು ಹೇಳಬೇಕೆಂದು ಕೂಡ ಕೇಳಿಕೊಳ್ಳುತ್ತೇನೆ.

ಶ್ರೀ ಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು); ಈಗಾಗಲೇ ಉತ್ತರವನ್ನು ಕೊಟ್ಟಿದ್ದೇವೆ. ಸರ್ಕಾರ ಇದನ್ನು ಸಹಾನುಭೂತಿಯಿಂದ ಗಣನೆಗೆ ತೆಗೆದುಕೊಳ್ಳುತ್ತದೆ.

ಅಧ್ಯಕ್ಷರು: 23ನೇ ಸೋಮವಾರ ತಡೆಹಿಡಿದಿರುವ ಪ್ರಶ್ನೆ ಮಾನ್ಯ ಎಸ್. ಆರ್. ವಿಶ್ವನಾಥ್ ರವರು ಸದನದಲ್ಲಿ ಹಾಜರಿಲ್ಲ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಅಧ್ಯಕ್ಷರೆ, ನನ್ನದೊಂದು ಪ್ರಶ್ನೆ ಉಳಿದಿದೆ.

ಅಧ್ಯಕ್ಷರು: ಕರೆಯುತ್ತೇನೆ. First round ಆಗಲಿ ನೀವು ಕರೆದಾಗ ಬರಲಿಲ್ಲ second round ನಲ್ಲಿ ಕರೆಯುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್: ಯಾವಾಗ ಕರೆಯುತ್ತೀರಿ? ಮಾನ್ಯ ಮಂತ್ರಿಗಳು ಸದನದಲ್ಲೇ ಇದ್ದಾರೆ.

ಅಧ್ಯಕ್ಷರು: ಕರೆಯುತ್ತೇನೆ. ಕುಳಿತುಕೊಳ್ಳಿ. ಮಾನ್ಯ ಶ್ರೀ ರುದ್ರೇಶ್‌ಗೌಡ ವೈ. ಎನ್. ರವರು.

ಗ್ರಂಥಾಲಯ ಕಟ್ಟಡ ನಿರ್ಮಾಣ

32 (707) **ಶ್ರೀ ರುದ್ರೇಶ್‌ಗೌಡ ವೈ. ಎನ್.(ಬೇಲೂರು):–** ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬೇಲೂರು ನಗರಕ್ಕೆ ಗ್ರಂಥಾಲಯ ಕಟ್ಟಡಕ್ಕಾಗಿ ಅನುದಾನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದಲ್ಲಿ, ಸೂಕ್ತ ನಿವೇಶನ ಇಲ್ಲದೆ ನಿರ್ಮಾಣ ವಿಳಂಬವಾಗುತ್ತಿರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ;

(ಇ) ನಿವೇಶನ ಖರೀದಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಶ್ರೀ ರೇವು ನಾಯಕ್ ಬೆಳಮಗಿ (ಮಾನ್ಯ ಲೋಕ ಶಿಕ್ಷಣ ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಹಾಗೂ ಲಾಟರಿ ಮತ್ತು ಪಶುಸಂಗೋಪನೆ ಸಚಿವರು)

(ಅ) ಅನುದಾನ ಮಂಜೂರು ಆಗಿರುವುದಿಲ್ಲ

(ಆ) ಬಂದಿಲ್ಲ. ಬೇಲೂರು ಪುರಸಭೆ ಇವರು ದಾನದ ರೂಪದಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಾಣ ಮಾಡಲು 100 x 100 ಅಡಿ ಅಳತೆಯ ನಿವೇಶನವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ಗ್ರಂಥಾಲಯ ಇಲಾಖೆಗೆ ಉಚಿತವಾಗಿ ನೀಡಿರುತ್ತಾರೆ.

(ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ರುದ್ರೇಶ್‌ಗೌಡ ವೈ. ಎನ್.: ಬೇಲೂರು ನಗರದ ಗ್ರಂಥಾಲಯ ಕಟ್ಟಡಕ್ಕೆ ಅನುದಾನ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದರೆ ಅನುದಾನ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ನನ್ನ knowledge ಪ್ರಕಾರ ಅನುದಾನ ಮಂಜೂರಾಗಿ ಹತ್ತು ವರ್ಷವಾಯಿತು. 40 ಲಕ್ಷ ರೂ.ಗಳು ಮಂಜೂರಾಗಿದೆ. ಇದಕ್ಕೆ ಅನುದಾನ ಮಂಜೂರಾಗಿಲ್ಲವೆಂದು ಸರ್ಕಾರ ಉತ್ತರ ಕೊಡುವುದಾದರೆ ಇದು ಯಾವ ರೀತಿ ಎಂದು ನನಗರ್ಥವಾಗುವುದಿಲ್ಲ. ಈ ಕುರಿತು ನೀವು clarification ತೆಗೆದುಕೊಂಡು, ಮೂರ್ನಾಲ್ಕು ದಿವಸಗಳಲ್ಲಿ ಉತ್ತರ ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) (ಲೋಕಶಿಕ್ಷಣ, ಸಾರ್ವಜನಿಕ ಗ್ರಂಥಾಲಯ, ಸಣ್ಣ ಉಳಿತಾಯ ಮತ್ತು ಲಾಟರಿ ಹಾಗೂ ಪಶುಸಂಗೋಪನೆ ಸಚಿವರ ಪರವಾಗಿ):

ಈಗಾಗಲೇ ಹೇಳುತ್ತೇನೆ. ಮಾನ್ಯ ಸದಸ್ಯರಾದ ವೈ. ಎನ್. ರುದ್ರೇಶ್‌ಗೌಡರವರು ಬೇಲೂರಿನಲ್ಲಿ ನಗರ ಗ್ರಂಥಾಲಯ ಕಟ್ಟಡವನ್ನು ಕೇಳಿದ್ದು, ನಿಜ. ಅವರು ಯಾವಾಗ ಹಣ ಮಂಜೂರಾಗಿತ್ತೆಂದು ಹೇಳುತ್ತಾರೋ ಆಗ ನಮಗೆ ಸ್ಥಳ ಇರಲಿಲ್ಲ. ಇದು ನಿಮಗೂ ಚೆನ್ನಾಗಿ ಗೊತ್ತಿದೆ. 2007ರಲ್ಲಿ 100 x 100 ಚದರ ಅಡಿ ಜಾಗವನ್ನು ಪುರಸಭೆಯವರು

ನಮಗೆ ಕೊಟ್ಟರು. ಹಣ ಮಂಜೂರಾದಾಗ ಜಾಗ ಇರಲಿಲ್ಲವೆಂದು ಆ ಹಣ ಹೋಯಿತು. ಈಗ ನಮ್ಮ ಹತ್ತಿರ 150 ಲಕ್ಷ ರೂ.ಗಳು ಮಾತ್ರ ಇಡೀ ರಾಜ್ಯದಲ್ಲಿ ಹೊಸ ಕಟ್ಟಡಗಳನ್ನು ಕಟ್ಟುವುದಕ್ಕೆ ಇದೆ. ಆ ಹಿನ್ನೆಲೆಯಲ್ಲಿ ನಮಗೆ ಬರುವಂತಹ ಹಣ ಸಾಕಷ್ಟಿದೆ. ಸುಮರು 126 ಕೋಟಿ ರೂ.ಗಳು ಈ ಗ್ರಂಥಾಲಯ ಸೆಸ್ ಏನಿದೆ, ಅದು ನಮ್ಮ ಸ್ಥಳೀಯ ಸಂಸ್ಥೆಗಳಿಂದ ನಮಗೆ ಬರಬೇಕಾಗಿದೆ. ಬಿ.ಬಿ.ಎಂ.ಪಿ. ಯಿಂದ ಸುಮಾರು 90 ಕೋಟಿ ರೂ.ಗಳಿಗಿಂತ ಹೆಚ್ಚು ಗ್ರಂಥಾಲಯ ಇಲಾಖೆಗೆ ಆ ಸೆಸ್ ಬರಬೇಕಾಗಿದೆ. ನಮ್ಮ ಇಲಾಖೆ ಈಗಾಗಲೇ ಸ್ಥಳೀಯ ಮುಖ್ಯಸ್ಥರ ಜೊತೆಗೆ ಬೇರೆ ಬೇರೆ ರೀತಿಯ ಸಭೆಗಳನ್ನು ಮಾಡುತ್ತಿದ್ದು, ಆ ಹಣ ಬಂದ ತಕ್ಷಣ ರಾಜ್ಯದಲ್ಲಿ ಸುಮಾರು 36 ಕಡೆ ತಾಲ್ಲೂಕು ಮಟ್ಟದ ಗ್ರಂಥಾಲಯಗಳಿಗೆ ಬೇಲೂರನ್ನೂ ಸೇರಿದಂತೆ ಕಟ್ಟಡಗಳಿಲ್ಲ. ಹಾಗಾಗಿ ಬೇಲೂರಿಗೂ ಸಹ ಈ ಹಣ ಲಭ್ಯವಾದ ತಕ್ಷಣ ಕಟ್ಟಡವನ್ನು ಮಾಡಿಕೊಡುತ್ತೇವೆ.

ಶ್ರೀ ರುದ್ರೇಶ್‌ಗೌಡ ವೈ. ಎನ್.: ನೀವು ಈ ಬಗ್ಗೆ ವಿವರವನ್ನು ನೀಡಬೇಕಾಗಿತ್ತು. ವಿವರವನ್ನು ನೀಡದೆ ಅನುದಾನ ಮಂಜೂರಾಗಿರುವುದಿಲ್ಲ ಎಂದರೆ ನಾವು ಏನು ತಿಳಿದುಕೊಳ್ಳಬೇಕು. ಯಾವ ಕಾರಣಕ್ಕೂ ಸಹ ಯಾವ ಪರಸಭೆಯಲ್ಲಿಯೂ ಕೂಡ 100 X 100 ಚದರ ಅಡಿ ಸೈಟ್ ಸಿಗುವುದಿಲ್ಲ. ನೀವು ಹಣ ಕೊಟ್ಟು buy ಮಾಡದೆ ಹೊರತು ಯಾವ ಕಾರಣಕ್ಕೂ ಸೈಟು ಸಿಗುವುದಿಲ್ಲ. ದಯವಿಟ್ಟು ನೀವು ತಿಳಿದುಕೊಳ್ಳಿ ಕರ್ನಾಟಕ ರಾಜ್ಯದಲ್ಲಿ ಮುಕ್ಕಾಲು ಭಾಗ ತಾಲ್ಲೂಕುಗಳಲ್ಲಿ 100 X 100 ಚ.ಅ.ಸೈಟ್ ಎಲ್ಲೂ ಇಲ್ಲ ಅದಕ್ಕೆ ಹಣ ಕೊಟ್ಟು ಸೈಟ್ buyl ಮಾಡಬೇಕು. ಗ್ರಂಥಾಲಯ ಎಲ್ಲಾ ಕಡೆಯೂ ಅತಿ ಮುಖ್ಯವಾಗಿದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಪುರಸಭೆಯವರು ಸೈಟ್ ಈಗಾಗಲೇ ನಮಗೆ ಕೊಟ್ಟಿದ್ದಾರೆ.

ಶ್ರೀ ರುದ್ರೇಶ್‌ಗೌಡ ವೈ. ಎನ್.: ಇಲ್ಲಾ ಸೈಟ್ ಕೊಟ್ಟಿಲ್ಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಕೊಟ್ಟಿದ್ದಾರೆ. ಹಣ ಬಿಡುಗಡೆ ಮಾಡಿದ ತಕ್ಷಣ ಆದ್ಯತೆಯ ಮೇಲೆ ಬೇಲೂರಿನ ಗ್ರಂಥಾಲಯವನ್ನು ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು: ಮಾನ್ಯ ದಿನೇಶ್ ಗುಂಡೂರಾವ್ ರವರು